O.S 438/2017

Pw1

ದಿನಾಂಕ 29.01.2024 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಕೆ.ಎಂ ವಕೀಲರಿಂದಃ

ನನ್ನ ಸಾಕ್ಷಿ ಪ್ರಮಾಣ ಪತ್ರ ಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ ಅಸಲು ದಾವಾ ಸಂಖ್ಯೆ 413/2017 ರ ದಾವೆಯನ್ನು ಪ್ರತಿವಾದಿಗಳು ನನ್ನ ತಾಯಿಯ ವಿರುದ್ಧ ಹಾಕಿರುವುದು ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ದಾವೆಯನ್ನು ನಾನೇ ನನ್ನ ತಾಯಿಯ ಪರವಾಗಿ ನಡೆಸುತ್ತಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ಸರ್ವೆ ನಂ.18/3 ಕ್ಕೆ ಸಂಬಂಧ ಪಟ್ಟ ದಾವೆ ಆಗಿರುತ್ತದೆ ಎಂದರೆ ಸರಿ. ಈ ಪ್ರಸ್ತುತ ದಾವೆಯು ಸರ್ವೆ ನಂ.18/11 ರ ಬಗ್ಗೆ ಹಾಕಿರುತ್ತೇವೆ ಎಂದರೆ ಸರಿ. ಸರ್ವೆ ನಂ.18/3 ಮತ್ತು ನಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಮೊದಲಿಗೆ ಸರ್ವೆ ನಂ. 18/3 ನನ್ನ ತಂದೆ ಜಿ. ರಂಗಪ್ಪ ರವರಿಗೆ ಸೇರಿದ ಸ್ವತ್ತಗಿತ್ತು ಎಂದರೆ ಸರಿ. ನನ್ನ ತಂದೆಯವರು ಸರ್ವೆ ನಂ.18/3 ರನ್ನು ಪೆರಿಯಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ಸದರಿ ಪೆರಿಯಪ್ಪ ರವರು ಖರೀದಿಸಿದ ನಂತರ ರೆವಿನ್ಯೂ ದಾಖಲಾತಿಗಳಲ್ಲಿ ಅವರ ಹೆಸರನ್ನು ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸದರಿ ಮಾರಾಟ ಮಾಡುವ ಮುಂಚೆ ಸರ್ವೆ ನಂ.18/3 ರಲ್ಲಿ 10 ಗುಂಟೆಯ ವ್ಯವಸಾಯದ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ, ಭೂ ಪರಿವರ್ತನೆ ಮಾಡಿಸಿರುತ್ತಾರೆ ಆದರೆ ಯಾವ ಉದ್ದೇಶಕ್ಕಾಗಿ ನನಗೆ ಗೊತ್ತಿರುವುದಿಲ್ಲ. ಸದರಿ ಭೂ ಪರಿವರ್ತನೆ ಆಗಿರುವ ಜಾಗವನ್ನು ಸೇರಿ ಒಟ್ಟಾರೆಯಾಗಿ 1 ಎಕರೆ 6 ಗುಂಟೆಯನ್ನು ನನ್ನ ತಂದೆ ಪೆರಿಯಪ್ಪ ರವರಿಗೆ ಸರ್ವೆ ನಂ.18/3 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 413/2017 ರಲ್ಲಿ ಸರ್ವೆ ನಂ.18/3 ರ ಬಗ್ಗೆ ನನ್ನ ತಂದೆ ಮತ್ತು ತಾಯಿಯ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ಆಗಿರುತ್ತದೆ ಎಂದರೆ ಸರಿ. ಸದರಿ ತಡೆಯಾಜ್ಞೆಯನ್ನು ರದ್ದು ಪಡಿಸಲು ನಾವು ಮೇಮೊ ವನ್ನು ಸದರಿ ದಾವೆಯಲ್ಲಿ

ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಮೇಮೊ ವಜಾ ಆಗಿರುತ್ತದೆ ಎಂದರೆ ಸರಿ.

ಸದರಿ ಮೇಮೊ ರಲ್ಲಿ ನಾವು ಕೆವಿಯಟ್ ಹಾಕಿದ್ದರು ನಮಗೆ ನೋಟಿಸ್ ಕೊಡದಂತೆ ತಾತ್ಕಾಲಿಕ ಆದೇಶ ಆಗಿದೆ ಎಂದು ಆ ಕಾರಣದಿಂದ ತಡೆಯಾಜ್ಞೆಯನ್ನು ವಜಾ ಗೊಳಿಸಲು ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಕೆವಿಯಟ್ ಅನ್ನು ಸರ್ವೆ ನಂ.18/11 ರ ಬಗ್ಗೆ ಹಾಕಿರುತ್ತೇವೆ ಎಂದರೆ ಸರಿ. ಪ್ರತಿವಾದಿಗಳು ಅಲಸು ದಾವಾ ಸಂಖ್ಯೆ413/2017 ರನ್ನು ಸರ್ವೆ ನಂ.18/3 ರ ಬಗ್ಗೆ ಹಾಕಿರುತ್ತಾರೆ ಎಂದರೆ ಸರಿ. ಕೆವಿಯಟ್ ಹಾಕಿರುವ ಸರ್ವೆ ನಂ. ಬೇರೆ ಇದ್ದ ಕಾರಣ ಸದರಿ ಮೇಮೊ ವನ್ನು ವಜಾಗೊಳಿಸಲಾಯಿತು ಎಂದರೆ, ವಜಾ ಆಗಿರುತ್ತದೆ ಯಾವ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ.

ಸದರಿ ಮೇಮೊವಿನ ಆದೇಶದ ಮೇರೆಗೆ ನಾವು W.P No.53306/2017 ರಂತೆ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇವೆ ಎಂದರೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಆದರೆ ಅರ್ಜಿಯ ನಂಬರ್ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ.18/11 ನನ್ನ ತಾಯಿರವರಿಗೆ ನನ್ನ ತಂದೆಯು ದಾನ ಪತ್ರ ಬರೆದುಕೊಟ್ಟಿರುತ್ತಾರೆ . ನಿಪಿ-2 ರಂತೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅಸಲು ದಾವಾ ಸಂಖ್ಯೆ 413/2017 ರಲ್ಲಿ ತಡೆಯಾಜ್ಞೆ ಆದ ನಂತರ ದಾನ ಪತ್ರದ ತಿದ್ದುಪಡಿಯನ್ನು ನಿಪಿ3 ರಂತೆ ನಾವು ಸೃಷ್ಟಿಸಿರುತ್ತೇವೆ ಎಂದರೆ 2017 ರಲ್ಲಿ ತಿದ್ದುಪಡಿ ಮಾಡಿರುತ್ತೇವೆ ದಿನಾಂಕ ನೆನಪಿಲ್ಲ. ನಿಪಿ-2 ರಲ್ಲಿ ಅನುಸೂಚಿ ಆಸ್ತಿಯ ಉತ್ತರ ದಿಕ್ಕಿಗೆ ರಾಷ್ಟ್ರೀಯ ಹೆದ್ದಾರಿ ಎಂದು ಬರೆದಿದೆ ಎಂದರೆ ಸರಿ.

ಉಚ್ಚ ನ್ಯಾಯಾಲಯದಲ್ಲಿ ನಾವು ಸಲ್ಲಿಸಿರುವ ಮೇಲ್ಮನವಿಯು ವಜಾ ಆದ ನಂತರ ನಿಪಿ-3 ರಂತೆ ನಾವು ಉತ್ತರ ದಿಕ್ಕನ್ನಲ್ಲಿ ಇದ್ದ ರಾಷ್ಟ್ರೀಯ ಹೆದ್ದಾರಿಯನ್ನು ದಕ್ಷಿಣ ದಿಕ್ಕಿಗೆ ಎಂದು ತಿದ್ದುಪಡಿ ಮಾಡಿಸಿರುತ್ತೇವೆ ಎಂದರೆ ಸರಿ. ಈ ದಾವೆಯ ಸಂಪೂರ್ಣ ಮಾಹಿತಿಯನ್ನು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು

ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರ್ವೆ ನಂ.18/11 ರ ಬಗ್ಗೆ ಮಾಹಿತಿ ಇದೆ, ಸರ್ವೆ ನಂ.18/3 ರ ಬಗ್ಗೆ ಸಂಪೂರ್ಣ ಮಾಹಿತಿ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಸಂಪೂರ್ಣ ಮಾಹಿತಿ ತಿಳಿದುಕೊಂಡು ಹಾಕಿರುತ್ತೇನೆ ಎಂದು ಬರೆದಿದೆ ಎಂದರೆ ಸರಿ. ನನ್ನ ತಂದೆ ಪೆರಿಯಪ್ಪರವರಿಗೆ ಮಾರಾಟ ಮಾಡಿರುವ ದಾಖಲೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ಸದರಿ ಮಾರಾಟವು 1990 ರಲ್ಲಿ ಮಾಡಿರುತ್ತಾರೆ ಎಂದರೆ ಇರಬಹುದು.

ನನ್ನ ತಂದೆ ಪೆರಿಯಪ್ಪ ರವರಿಗೆ ಮಾರಾಟ ಮಾಡುವಾಗ ಆಸ್ತಿಯ ದಕ್ಷಿಣ ದಿಕ್ಕಿಗೆ ರಾಷ್ಟ್ರೀಯ ಹೆದ್ದಾರಿ 4 ಎಂದು ಚಕ್ಕುಬಂದಿ ಬರೆದುಕೊಟ್ಟಿರುತ್ತಾರೆ ಎಂದರೆ ತಪ್ಪಾಗಿ ಬರೆದುಕೊಟ್ಟಿರುತ್ತಾರೆ. ಪ್ರತಿವಾದಿಗಳು ಪೆರಿಯಪ್ಪರಿವರಿಂದ ಸದರಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಇರಬಹುದು. ನನ್ನ ತಂದೆಯವರು ಪೆರಿಯಪ್ಪ ರವರಿಗೆ ಮಾರಾಟ ಮಾಡಿರುವ ಆಸ್ತಿಯನ್ನು ಪ್ರತಿವಾದಿಗಳು ಖರೀದಿಸಿರುತ್ತಾರೆ ಎಂದರೆ ಸರಿ. ಪೆರಿಯಪ್ಪ ರವರು ಭೂ ಪರಿವರ್ತನೆಯಾದ 10 ಗುಂಟೆಯನ್ನು ಹೊರತು ಪಡಿಸಿ ಉಳಿದ ಆಸ್ತಿಯನ್ನು ಸಹ ಭೂ ಪರಿವರ್ತನೆ ಮಾಡಿಸಿ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭೂ ಪರಿವರ್ತನೆ ಆಗಿರುವ ವಿಚಾರ ನನಗೆ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೆರಿಯಪ್ಪರವರಿಂದ ಖರೀದಿಸಿದ ನಂತರ ಪ್ರತಿವಾದಿಗಳು ಸರ್ವೆ ನಂ.18/3 ರಲ್ಲಿ ಸಂಪೂರ್ಣ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿವಾದಿಗಳ ಹೆಸರಿಗೆ ಎಲ್ಲಾ ದಾಖಲಾತಿಗಳು ನಮೂದಾಗಿರುತ್ತವೆ ಎಂದರೆ ಇರಬಹುದು. ನಿಪಿ-4 ರಿಂದ 71 ರವರೆಗೂ ಸಲ್ಲಿಸಿರುವ ಎಲ್ಲಾ ದಾಖಲೆಗಳು ಸರ್ವೆ ನಂ.18/11 ರ ಬಗ್ಗೆ ಆಗಿರುತ್ತದೆ ಎಂದರೆ ಸರಿ. ನಿಪಿ-71 ರ ವಿರುದ್ಧ ಪ್ರತಿವಾದಿಗಳ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.18/3 ಕ್ಕೆ ಹೊಂದಿಕೊಂಡು ಸರ್ವೆ ನಂ.18/11 ಇದೆ ಎಂದರೆ ಸರಿ. ಸರ್ವೆ ನಂ.18/11 ರಲ್ಲಿ ನವಗೆ 11 ಗುಂಟೆ ಮಾತ್ರ ಇದೆ ಎಂದರೆ ಸರಿ. ಸದರಿ ಜಮೀನು ರಾಷ್ಟ್ರೀಯ ಹೆದ್ದಾರಿಗೆ

ಹೊಂದಿಕೊಂಡಿರುವ ಜಮೀನು ಎಂದರೆ ಸರಿ.

ಸರ್ವೆ ನಂ.18/11 ರಲ್ಲಿ ನಾವು ವಾಣಿಜ್ಯ ಅಂಗಡಿಗಳನ್ನು ಮಾಡಿರುತ್ತೇವೆ ಎಂದರೆ, ಸುಮಾರು 4 ವರೆ ಗುಂಟೆಯಲ್ಲಿ ಮಾಡಿರುತ್ತೇವೆ. ಸದರಿ 4 ವರೆ ಗುಂಟೆಯಲ್ಲಿ ನಾವು ವಾಣಿಜ್ಯ ಅಂಗಡಿಗಳನ್ನು ತೆರೆದಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಲ್ಲಿಸಿರುತ್ತೇವೆ. ಸದರಿ ವಾಣಿಜ್ಯ ಅಂಗಡಿಗಳನ್ನು ತೆರೆಯಲು ಪಂಚಾಯಿತಿಯಿಂದ ಅನುಮತಿಯನ್ನು ಪಡೆದಿದ್ದೀರಾ ಎಂದರೆ ಪಡೆದಿರುತ್ತೇವೆ. ಸದರಿ ಅನುಮತಿಯ ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಹಾಜರು ಪಡಿಸಬಹುದು. ನಾವು ಯಾವುದೇ ಅನುಮತಿಯನ್ನು ಪಡೆಯದೇ ಕಾನೂನು ವಿರುದ್ಧವಾಗಿ ಅಂಗಡಿಗಳನ್ನು ತೆರೆದಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ-3 ರಂತೆ ತಿದ್ದುಪಡಿಯನ್ನು ಮಾಡಲು ನಾವು ಪ್ರತಿವಾದಿಗಳಿಗೆ ನೋಟಿಸ್ ಅನ್ನು ನೀಡಿರುತ್ತೀರಾ ಎಂದರೆ ನೀಡಿರುವುದಿಲ್ಲ. ಪ್ರತಿವಾದಿಗಳ ಜಾಗವನ್ನು ಕಬಳಾಯಿಸುವ ಉದ್ದೇಶದಿಂದ ನಾವು ಸದರಿ ತಿದ್ದುಪಡಿ ಪತ್ರವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ ನಾವು ಪ್ರತಿವಾದಿಗಳ ವಿರುದ್ದ ಸುಳ್ಳು ಆರೋಪಣೆ ಮಾಡಿ ಸುಳ್ಳು ದಾವೆಯನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ.18/3 ರಲ್ಲಿ ಪ್ರತಿವಾದಿಗಳು ಸರ್ವೆ ಮಾಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

ಸಿ/ಸಿ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.